ಹೆಚ್ಚೇ ಒಲವಿತ್ತು. ಇದು ಅವಳ ಗೊಣಗುವಿಕೆಯಲ್ಲಿ ಗೊತ್ತಾಗುತ್ತಿತ್ತು. 'ಅಷ್ಟೊತ್ತು ಇಷ್ಟೊತ್ತು ಅನ್ನೋದು ಕಾಣ್ದೆ ಅಕ್ಕಿ ಎಣ್ಣೆ ಕೊಟ್ಟವಳನ್ನ, ಮುಸ್ಸಂಜೆಗೆ ಮರೆತುಬುಟ್ರೆ ಹೆಂಗೆ' ಅಂತ ಆಗಾಗ್ಗೆ ಹೇಳುತ್ತಿದ್ದಳು. ದಿನಕ್ಕೊಮ್ಮೆಯಾದರೂ ಅವಳ ಕಷ್ಟ ಸುಖದಲ್ಲಿ ಭಾಗಿಯಾಗದೆ ಇರುತ್ತಿರಲಿಲ್ಲ. ಈಗಲೂ ಕಮಲಕ್ಕನ ಬಗ್ಗೆಯೇ ಮಾತನಾಡುತ್ತಿರುವಾಗ ಗೌಡರ ಕೇರಿಯತ್ತ ಹೋಗಿದ್ದ ಅಣ್ಣ ಸುಮಾರು ಮಧ್ಯರಾತ್ರಿಗೆ ಮನೆಗೆ ಬಂದನು. 'ಇಷ್ಟೊತ್ತಿಗೇನಪ್ಪ ಮನೆಗೆ ಬರೋದು' ಎಂದು ಕೇಳಿದಳು. ಅಣ್ಣ ನಿರುಮ್ಮಳನಾಗಿಯೇ, 'ಏನಿಲ್ಲ ಪಟೇಲ್ರ ಮಗ ಮತ್ತೆ ಮಿಲ್ಲಿನ ಶೀನೇಗೌಡ್ರು ಮಗ ಎಲ್ಲ ಸಿಕ್ಕಿದ್ರು, ಮಾತಾಡ್ತಾ ಕುಂತುಬಿಟ್ಟಿದ್ವಿ' ಎಂದು ಮಲಗಲು ಹೋದನು. ಇತ್ತ ಅವ್ವ ಪಟೇಲ್ರ ಮಗ ಮೊನ್ನೆ ದಿವಸ ಕಮಲಕ್ಕನ ಬಗ್ಗೆ ಇಲ್ಲಸಲ್ಲದ್ದೆಲ್ಲ ಬಾವಿ ಕಟ್ಟೆ ಮೇಲೆ ಕುಂತು ಮಾತಾಡಿದ್ದು ನೆನಪಿಸಿಕೊಂಡು ಅದನ್ನು ಒಂಚೂರು ಹೇಳಿ ಏನನ್ನೋ ಬಾಯಾಡಿಸುತ್ತಾ ಮಲಗಿದಳು.

ಇದಾದ ಎರಡು ದಿನಕ್ಕೆ ಅವ್ವ ಕಮಲಕ್ಕನ ತೋಟದಲ್ಲಿ ಮಲ್ಲಿಗೆ ಹೂ ಕುಯ್ಯಲು ಹೋದಳು. ಶಾಲೆ ಮುಗಿಸಿ ನಾನೂ ಬಂದೆ. ಕಾಡಿನ ಪಕ್ಕವೇ ತೋಟ ಇದ್ದುದರಿಂದ ಕಣ್ಣಾಡಿಸಿದಷ್ಟೂ ಹಸಿರೇ ತುಂಬಿ ತುಳುಕುತ್ತಿತ್ತು. ತೋಟದಲ್ಲಿ ಮಲ್ಲಿಗೆ ತುಂಬಿ ನಿಂತಿತ್ತು. ಹತ್ತಾರು ಆಳುಗಳು ಮೊಗ್ಗುಗಳನ್ನು ಆರಿಸಿ ಕುಯ್ಯುತ್ತಿದ್ದರು. ತೋಟದ ಸುತ್ತ ತೆಂಗಿನ ಮರಗಳು ಆಕಾಶ ನೋಡುತ್ತಿದ್ದವು. ಸಂಜೆಯಾಗುತ್ತಿದ್ದರಿಂದ ನವಿಲುಗಳು ತೋಟಕ್ಕೆ ಬರಲು ಇಣುಕುತ್ತಿದ್ದವು. ತೋಟದ ಪಕ್ಕದ ರಸ್ತೆಯಲ್ಲಿ ಮನೆಗೆ ಹೊರಟಿದ್ದ ಹಸುಗಳ ಕೊರಳಿಂದ ಗಂಟೆಗಳ ಸದ್ದು ಕೇಳುತ್ತಿತ್ತು. ಸಂಜೆಯ ಸೂರ್ಯ ನೀಲಿ ಗಗನವನ್ನು ಕೆಂಪಾಗಿಸಿ ಇಳಿಯತೊಡಗಿದ್ದ. ಮಲ್ಲಿಗೆ ಗಿಡಗಳ ಒಳಗೆ ಹೂವರಳಿದಂತೆ ಕಮಲಕ್ಕ ಅವ್ವನೊಂದಿಗೆ ಮಾತಾಡುತ್ತಾ ಹೂ ಕುಯ್ಯುತ್ತಿದ್ದಳು. ಇಬ್ಬರೂ ಎಲ್ಲರಿಗಿಂತ ದೂರದಲ್ಲೇ ಇದ್ದರು. ಅವರಿಬ್ಬರ ಬಳಿ ಹೋಗಲು ನಾನು ಸರಸರ ನಡೆದೆ.

ಹೂ ಕುಯ್ಯುತ್ತಿದ್ದ ಆಳುಗಳಲ್ಲಿ ಒಬ್ಬರು, 'ಬಿನ್ನಾಣಗಿತ್ತಿಯರಿಬ್ರು ಮಾತುಗೆ ನಿಂತವ್ರೆ ನೋಡು, ಇನ್ನೇನು ಹೋರಿಗೆ ಬಂದಿರೊ ದನಿನಂಗೆ ಹೊಯ್ತಾಳೆ ನೋಡು ಆ ಗೌಡ್ತಿ ಅನ್ನೋಳು, ಇನ್ನೊಬ್ಳು ಏನೂ ಗೊತ್ತಿಲ್ದೆ ಇರೋ ತರ ಹೂ ಕುಯ್ತಾಳೆ, ಬೇಕಾರೆ ನೋಡು' ಎಂದು ಹೇಳಿದ್ದು ನನ್ನ ಕಿವಿಗೆ ಬಿದ್ದಿತು. ಕಾಡಿನ ಕಡೆಯಿಂದ ಹಂದಿಗಳು ತೋಟಕ್ಕೆ ದಾಳಿಯಿಟ್ಟಂತೆ ಬಂದು ಮರೆಯಲ್ಲಿ ಸರಿದು ಹೊದವು. ಹೆದರಿದ ನಾನು ಇವರನ್ನೆಲ್ಲ ದಾಟಿ ಇಬ್ಬರ ಬಳಿಗೆ ಹೋದೆ. 'ಗಿರಿಜಾ... ಹೆಂಗೋ ನಿನ್ಮಗಳು ಬಂದ್ಳು ಒಸಿ ಕೂಯ್ತಿರು, ಬಂದುಬಿಡ್ತೀನಿ' ಎಂದು ಹೇಳಿ ಕಮಲಕ್ಕ ಹೊರಟಳು. ಅವ್ವ ಸುಮ್ಮನೆ ತಲೆಯಾಡಿಸಿದಳು. ನನಗೆ ಅವರ ಮಾತು ನೆನಪಿಗೆ ಬಂತು. ಏನೂ ಮಾತಾಡದೆ ತುಂಬಿದ ಮಲ್ಲಿಗೆಯ ಮೊಗ್ಗುಗಳಿಗೆ ಕೈಯಿಟ್ಟೆ. ಸರಸರ ಅಂತ ಮಡಿಲು ತುಂಬುತ್ತಿತ್ತು. ಅವರ ಮಾತು ಹಾಗೇ ಇದ್ದವು. ಕತ್ತೆತ್ತಿ ನೋಡಿದೆ. ಸಂಜೆಯ ಸೂರ್ಯ ಮುಳುಗಿದ್ದನು. ಹಕ್ಕಿಗಳು ಗೂಡು ಸೇರಲು ಹೊರಟಿದ್ದವು. ದೂರದ ಮರಗಳು ಬೆಟ್ಟದ ನೆರಳಲ್ಲಿ ಕರಗುತ್ತಿದ್ದವು. ಈ ಕಡೆ ಕಾಡಿನ ಕಡೆಗೆ ಇಳಿಬಿದ್ದ ಜಡೆಯ ತಲೆಯೊಂದು ನಡೆದು ಹೋಗುತ್ತಿತ್ತು. ಅದು ಕಮಲಕ್ಕನೇ ಎಂದು ಗೊತ್ತಿತ್ತು. ಅಷ್ಟು ದೂರ ಹೋದ ಮೆಲೆ ಬಿಳಿಯ ಬಟ್ಟೆಯೊಂದು ಜೊತೆಯಾಗಿ ಅಲ್ಲೇ ಕುಂತು ಮಾತಾಡಿಕೊಳ್ಳುತ್ತಿರುವಂತೆ ಕಂಡಿತು. ಅವ್ವ, 'ಏನತ್ಲಾಗೆ ನೋಡ್ತಿದೀಯ... ಕತ್ಲಾಯ್ತು ಬೇಗಂದೊಷ್ಟು ಬಿಡ್ಸು ಮನೆಗೋಗುವ' ಎಂದಳು. ತಲೆಬಗ್ಗಿಸಿದೆ. ಮಡಿಲುತುಂಬಾ ಮಲ್ಲಿಗೆ ಮೊಗ್ಗುಗಳು. 'ನಾವ್ ಬತ್ತೀವಿ ಗಿರಿಜಕ್ಕ... ನೀವಿನ್ನೂ ಬರೋದು ತಡವೇನೋ' ಎಂದ ಹೂ ಕುಯ್ಯುತ್ತಿದ್ದ ಗೌರಕ್ಕನ ಮಾತಿನಲ್ಲಿನ ಕುಹಕ ಕಂಡು ಅವ್ವ ಸುಮ್ಮನೆ ಹೂಂಗುಟ್ಟಿದಳು, ಅಷ್ಟೇ.

ಬೇಸಿಗೆ ಕಳೆದು ಮತ್ತೆ ಮಳೆ ಶುರುವಾಯಿತು. ಎಲ್ಲೆಲ್ಲೂ ಉಳುಮೆ ಕೆಲಸಗಳು ಹೆಚ್ಚಾದವು. ಕಮಲಕ್ಕನ ಹೊಲಗಳೂ ಕೆಂಪು ಕೆಂಪಾಗಿ ನಿಂತವು. ಕಮಲಕ್ಕನ ಗಂಡ ಸಣ್ಣಯ್ಯ ಆಳುಗಳ ಕೈಲಿ ಎಲ್ಲವನ್ನೂ ಮಾಡಿ ಮುಗಿಸಿದ್ದ. ಇತ್ತೀಚೆಗೆ ಹೆಂಡತಿಯ ಸುದ್ದಿ ತನ್ನ ಕಡೆಗೆ ಗಾಳಿ ಬೀಸಿದಂಗೆ ಬಂದರೂ, 'ಅಕ್ಕ ಅವ್ಳಲ್ಲ, ಎಲ್ಲ ನೋಡ್ಕೊತಾಳೆ ಬಿಡು' ಎನ್ನುವಂತೆ ಸುಮ್ಮನಿದ್ದನು. ಮೊದಲಿನಿಂದಲೂ ಕಮಲಕ್ಕನೊಂದಿಗೆ ಸರಸದಿಂದ